**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ಚನ್ನಗಿರಿ.**

**ಎಂ ವಿ ಸಿಃ 408/2023** **RW-1**

| | |
|---|---|
| ಸಾಕ್ಷಿದಾರರ ಹೆಸರು | ಹೆಚ್ ಸಿ ರವಿ |
| ತಂದೆಯ ಹೆಸರು | ಹೆಚ್ ಎಂ ಚಂದ್ರಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ಅಧೀಕ್ಷಕರು |
| ವಾಸಸ್ಥಳ | ದಾವಣಗೆರೆ |
| ದಿನಾಂಕ | 22.07.2026 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು |

**ಮುಖ್ಯ ವಿಚಾರಣೆಃ 2 ನೇ ಎದುರುದಾರರ ಪರ ಶ್ರೀ ಎ ಎಂ ವಿ ವಕೀಲರಿಂದಃ**

ನನಗೆ ಈ ನ್ಯಾಯಾಲಯದಿಂದ ಬೈಕ್ ನಂ ಕೆಎ-17-ಹೆಚ್ ಎಫ್ -4110 ಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಲು ಸಮನ್ಸ ಬಂದಿದ್ದು, ಈ ದಿನ ನಾನು ಸದರಿ ಬೈಕ್ ನ ಚಾಲಕನಿಗೆ ಅಪಘಾತದ ದಿನ ಡಿಎಲ್ ಇರಲಿಲ್ಲ ಎಂದು ಹಿಂಬರಹ ನೀಡುತ್ತಿದ್ದು ಅದನ್ನು ನಿಆರ್.1 ಎಂದು, ಸದರಿ ವಾಹನಕ್ಕೆ ಸಂಬಂಧಿಸಿ B extract, noting sheet and Temporary registration certificate, pollution certificate, sale certificate, tax invoice, Aadhar card of the owner, E-receipt, Ownership change form No.31, affidavits and death certificate, G-tree, deceased wife Aadhar card, policy copy ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಒಟ್ಟಾಗಿ ನಿಆರ್.2 ಎಂದು ಗುರುತಿಸಲಾಯಿತು. ವಾಹನವನ್ನು ನೋಂದಣಿ ಮಾಡುವಾಗ ಅಥವಾ ವಾಹನದ ಮಾಲೀಕ ಮರಣ ಹೊಂದಿದ ನಂತರ ಅವರಿಗೆ ಸಂಬಂಧಿಸಿದ ಚಾಲನಾ ಪರವಾನಗಿಯನ್ನು ಹಾಜರುಪಡಿಸಲು ಕೇಳಿಲ್ಲ. ಅವರ ಬಳಿ ಒಂದು ವೇಳೆ ಚಾಲನಾ ಪರವಾನಗಿ ಇದ್ದರೆ ಹಾಜರುಪಡಿಸುತ್ತಿದ್ದರು. ವಾಹನವನ್ನು ನೋಂದಣಿ ಮಾಡುವಾಗ ಮಾಲೀಕರು ತೆಗೆದುಕೊಂಡ ಪಾಲಿಸಿ Own damage 01 year, 3rd party liability 03 years ಇರುತ್ತದೆ. ಸದರಿ ಪಾಲಿಸಿ ಪ್ರಕಾರ ಅಪಘಾತದ ಸಮಯದಲ್ಲಿ 3rd party ಇದ್ದು ಹಿಂಬದಿ ಸವಾರ ಮತ್ತು ಚಾಲಕನಿಗೆ ಯಾವುದೇ ಪ್ರೀಮಿಯಂ ಹಣ ಪಾವತಿಸಿಲ್ಲ.

**ಪಾಟೀ ಸವಾಲುಃ ಅರ್ಜಿದಾರರ ಪರ ವಕೀಲರಿಂದಃ**

ಅರ್ಜಿದಾರರು ಮತ್ತು ಅವರ ಪರ ವಕೀಲರು ಗೈರು ಹಾಜರಿದ್ದು ಯಾವುದೇ ಸಕಾರಣಗಳು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರು ವಿಚಾರಣೆಃ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**